ಶ್ರೀ ಸುನೀಲ್ ಎ ಹೆಗಡೆ : ಮಾನ್ಯ ಅಧ್ಯಕ್ಷರೆ, ಇದರ ಬಗ್ಗೆ ಡಿ.ಸಿ. ಅಧ್ಯಕ್ಷತೆಯಲ್ಲಿ ಒಂದು ಸಭೆ ಆಗಬೇಕಾಗುತ್ತದೆ. ಆದ್ದರಿಂದ, ಸಭೆ ಮಾಡುವುದಕ್ಕೆ ಜಿಲ್ಲಾಧಿಕಾರಿಯವರಿಗೆ ಡೈರೆಕ್ಷನ್ ಕೊಟ್ಟು ಆ ಸಭೆಯ ವರದಿಯನ್ನು ತರಸಿಕೊಳ್ಳಬೇಕೆಂದು ಸರ್ಕಾರಕ್ಕೆ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಎಸ್. ಸುರೇಶ್ ಕುಮಾರ್ : ಮೂಲಭೂತ ಸೌಕರ್ಯ ಕಲ್ಪಿಸುವುದರ ಬಗ್ಗೆ ನಾನು ಈಗಾಗಲೇ ಉತ್ತರ ಕೊಟ್ಟಿದ್ದೇನೆ. ತಾವು ಈಗ ಹೊಸದಾಗಿ ಪ್ರಸ್ತಾಪ ಮಾಡಿರುವ ಪ್ರಕಾರ ಜಿಲ್ಲಾಧಿಕಾರಿಯರಿಗೆ ಸೂಚನೆ ಕೊಟ್ಟು ಆ ಬಗ್ಗೆ ಕೂಡ ಸಭೆ ಮಾಡುವುದಕ್ಕೆ ಹೇಳುತ್ತೇವೆ.

8) ವಿಷಯ : ಹಾಸನ ಜಿಲ್ಲೆ, ಸಕಲೇಶಪುರ ತಾಲ್ಲೂಕಿಗೆ 70 ಗ್ರಾಮಗಳಿಗೆ ನೈಸರ್ಗಿಕ ನೀರನ್ನು ಕುಡಿಯುವ ಉದ್ದೇಶಕ್ಕಾಗಿ ನೀಡಲು ರೂ.12 ಕೋಟಿ ಅಂದಾಜು ತಯಾರಿಸಿ ಸಲ್ಲಿಸಿದ್ದು, ಬಹುಹಳ್ಳಿಗಳ ಯೋಜನೆಯಲ್ಲಿ ಮಂಜೂರಾತಿ ಮಾಡುವ ಬಗ್ಗೆ

ಶ್ರೀ ಹೆಚ್.ಕೆ. ಕುಮಾರಸ್ವಾಮಿ (ಸಕಲೇಶಪುರ) : ಹಾಸನ ಜಿಲ್ಲೆ, ಸಕಲೇಶಪುರ ತಾಲ್ಲೂಕಿಗೆ 70 ಗ್ರಾಮಗಳಿಗೆ ನೈಸರ್ಗಿಕ ನೀರನ್ನು ಕುಡಿಯುವ ಉದ್ದೇಶಕ್ಕಾಗಿ ನೀಡಲು ರೂ.12 ಕೋಟಿ ಅಂದಾಜು ತಯಾರಿಸಿ ಸಲ್ಲಿಸಿದ್ದು, ಬಹುಹಳ್ಳಿಗಳ ಯೋಜನೆಯಲ್ಲಿ ಮಂಜೂರಾತಿ ಮಾಡುವ ಬಗ್ಗೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) : ಮಾನ್ಯ ಅಧ್ಯಕ್ಷರೆ,

ಹಾಸನ ಜಿಲ್ಲೆ ಸಕಲೇಶಪುರ ತಾಲ್ಲೂಕಿನ ಕುಡಿಯುವ ನೀರಿನ ಸಮಸ್ಯೆ ಇರುವ ಸುಮಾರು 70 ಗ್ರಾಮಗಳಿಗೆ ನೈಸರ್ಗಿಕ ಜಲಧಾರೆಯಿಂದ ಕುಡಿಯುವ ನೀರು ಒದಗಿಸಲು ರೂ.10.88 ಕೋಟಿಗಳಲ್ಲಿ ಒಂದು ರೇಖಾ ಅಂದಾಜನ್ನು ಫೆಬ್ರವರಿ–2012 ರಲ್ಲಿ ಹಾಸನ ಜಿಲ್ಲಾ ಪಂಚಾಯತ್ ತಯಾರಿಸಿದೆ. ನೈಸರ್ಗಿಕ ಜಲಧಾರೆಯಿಂದ ಹರಿಯುವ ನೀರು ಜನರಿಗೆ ಕುಡಿಯಲು ಯೋಗ್ಯವಾಗಿರುತ್ತದೆ. ದಿನದ 24 ಗಂಟೆಗಳೂ ಸಹ ನೀರನ್ನು ಸರಬರಾಜು ಮಾಡಬಹುದಾಗಿದ್ದು ವಿದ್ಯುತ್ ಅವಶ್ಯಕತೆ ಇರುವುದಿಲ್ಲ. ಸದರಿ ನೈಸರ್ಗಿಕ ಜಲಧಾರೆಗಳಿಂದ ಶಾಶ್ವತ ಕುಡಿಯುವ ನೀರು ವ್ಯವಸ್ಥೆ ಕಲ್ಪಿಸುವ

ಕುರಿತು ತಜ್ಞ ಸಂಸ್ಥೆಯಿಂದ ಆರ್ಥಿಕ ಮತ್ತು ತಾಂತ್ರಿಕ ಕಾರ್ಯಸಿಂಧುತ್ವದ ವರದಿ ಪಡೆದು ಈ ಕುರಿತಂತೆ 2012–13ರ ಸಾಲಿನಲ್ಲಿ ಅನುಮೋದಿಸುವ ಕುರಿತು ಪರಿಶೀಲಿಸಲುದ್ದೇಶಿಸಿದೆ.

ಶ್ರೀ ಹೆಚ್.ಕೆ. ಕುಮಾರಸ್ವಾಮಿ : ಮಾನ್ಯ ಅಧ್ಯಕ್ಷರೆ, ಸದರಿ ಯೋಜನೆಗೆ ಅನುಮೋದಿಸಲು ಒಪ್ಪಿಕೊಂಡಿದ್ದಾರೆ. ನಾನು ಈ ಸಂದರ್ಭದಲ್ಲಿ ಹೇಳುವು ದೇನೆಂದರೆ, ಆರ್ಥಿಕ ಹೊರೆ ಕಡಿಮೆಯಾಗುತ್ತದೆ. ಹಾಗೆಯೇ ಶುದ್ಧವಾದ ನೀರು ಸಿಗುತ್ತದೆ ಮತ್ತೆ ಅಲ್ಲಿ ವಿದ್ಯುತ್ ಸೌಲಭ್ಯದ ಅವಶ್ಯಕತೆ ಕೂಡ ಇರುವುದಿಲ್ಲ. ಆದ್ದರಿಂದ, ಈಗ ಬಂದಿರುವ ಅಂದಾಜಿಗೆ ದಯಮಾಡಿ ಒಪ್ಪಿಗೆ ನೀಡಿ ಸುಮಾರು 70 ಗ್ರಾಮಗಳಿಗೆ ಕುಡಿಯುವ ನೀರಿನ ಕೊರತೆಯನ್ನು ನೀಗಿಸಬೇಕೆಂದು ಮತ್ತೊಮ್ಮೆ ಒತ್ತಾಯ ಮಾಡುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ : ಆಯಿತು.

9) **ವಿಷಯ : ಹೊಸದುರ್ಗ ತಾಲ್ಲೂಕು ಗೊರವಿನಕಲ್ಲು ಗ್ರಾಮದ ರಿ.ಸರ್ವೆ ನಂ.59 ರ ಸರ್ಕಾರಿ ಜಾಗ ಕೋಟ್ಯಾಂತರ ರೂಪಾಯಿ ಬೆಲೆ ಬಾಳುವ ಸ್ಥಳದಲ್ಲಿ ಸರ್ವೇ ನಂ.60ರ ಗೊರವಿನಕಲ್ಲು ಜಾಗದ ದಾಖಲೆ ತೋರಿಸಿ ಅಧಿಕಾರ ದುರುಪಯೋಗ ಪಡಿಸಿಕೊಂಡು ಅಕ್ರಮ ದಾಖಲೆಗಳನ್ನು ಮಾಡಿ ಒತ್ತುವರಿ ಮಾಡಿಕೊಂಡು ವಾಣಿಜ್ಯ ಕಟ್ಟಡ ಕಟ್ಟಿರುವ ಪುರಸಭೆಯ ಈಗಿನ ಅಧ್ಯಕ್ಷರು ಇವರ ಮೇಲೆ ಹಾಗೂ ಇವರಿಗೆ ದಾಖಲೆ ಗಳನ್ನು ಮಾಡಿಕೊಟ್ಟವರ ಮೇಲೆ ಸೂಕ್ತ ಕ್ರಮ ಜರುಗಿಸುವ ಬಗ್ಗೆ**

ಶ್ರೀ ಗೂಳಿಹಟ್ಟಿ ಡಿ. ಶೇಖರ (ಹೊಸದುರ್ಗ) : ಮಾನ್ಯ ಅಧ್ಯಕ್ಷರೆ, ಹೊಸದುರ್ಗ ತಾಲ್ಲೂಕು ಗೊರವಿನಕಲ್ಲು ಗ್ರಾಮದ ರಿ.ಸರ್ವೇ ನಂ.59ರ ಸರ್ಕಾರಿ ಜಾಗ ಕೋಟ್ಯಾಂತರ ರೂಪಾಯಿ ಬೆಲೆ ಬಾಳುವ ಸ್ಥಳದಲ್ಲಿ ಸರ್ವೇ ನಂ.60ರ ಗೊರವಿನಕಲ್ಲು ಜಾಗದ ದಾಖಲೆ ತೋರಿಸಿ ಅಧಿಕಾರ ದುರುಪ ಯೋಗಪಡಿಸಿಕೊಂಡು ಅಕ್ರಮ ದಾಖಲೆಗಳನ್ನು ಮಾಡಿ ಒತ್ತುವರಿ ಮಾಡಿಕೊಂಡು ವಾಣಿಜ್ಯ ಕಟ್ಟಡ ಕಟ್ಟಿರುವ ಪುರಸಭೆಯ ಈಗಿನ ಅಧ್ಯಕ್ಷರು ಇವರ ಮೇಲೆ ಹಾಗೂ ಇವರಿಗೆ ದಾಖಲೆಗಳನ್ನು ಮಾಡಿಕೊಟ್ಟವರ ಮೇಲೆ